# ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳು, ಅಥಣಿ

---

**ಸಿ.ಸಿ.ನಂ : 2264/2017** **ದಿನಾಂಕ :19.7.2023**

**ಸಿ. ಡಬ್ಲೂ : 2**

**ಪಿ. ಡಬ್ಲೂ : 1**

---

| | | |
|---|---|---|
| ಸಾಕ್ಷಿದಾರರ ಹೆಸರು | : | ದಶರಥ ಕೊಂಡಿಬಾ ಪಾಟೀಲ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಸಂಬರಗಿ |
| ದಿನಾಂಕ | : | 19.7.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

---

* * *

<u>ಮುಖ್ಯ ವಿಚಾರಣೆ ಸ.ಸ.ಅ. ವಕೀಲರವರಿಂದಃ</u>

ಚಾಸಾ 3 ರವರ ಪರಿಚಯ ಇರುತ್ತದೆ, ಚಾಸಾ 1, ಆರೋಪಿತರು ಪರಿಚಯ ಇರುವುದಿಲ್ಲ, ನಾನು ಈ ಹಿಂದೆ ಅವರನ್ನು ನೋಡಿರುವುದಿಲ್ಲ. ಸಾಕ್ಷಿಯು ಮಹಾಜರ ಮೇಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಾಜರನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1 ಎಎಂದು ಗುರುತಿಸಲಾಯಿತು. ಪೋಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿರುವುದಿಲ್ಲ. ನಿಪಿ-1 ರಲ್ಲಿ ಇರುವ ವಿಷಯಗಳು ನನಗೆ ಗೊತ್ತಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸ.ಸ.ಅ. ರವರಿಂದಃ</u>

ದಿನಾಂಕಃ 22-02-2017 ರಂದು ಮುಂಜಾನೆ 10.00 ಗಂಟೆಗೆ, ಪೋಲಿಸರು, ನಿಮ್ಮನ್ನು, ಚಾಸಾ-1, 3 ರವರನ್ನು ಚಾಸಾ-1 ರವರ ಸರ್ವೆ ನಂಬರ 41 ಮತ್ತು ಘಟನಾ ಸ್ಥಳದ ಬಾವಿಯ ಮಧ್ಯದಲ್ಲಿ ಇರುವ ಸ್ಥಳದಲ್ಲಿ ಕರೆಯಿಸಿದ್ದರು, ಚಾಸಾ-1 ರವರು ತೋರಿಸಿದಂತೆ, ಪೊಲೀಸರು ನಿಮ್ಮ ಸಮಕ್ಷಮ ಆರೋಪಿತರು 2 ಕರೆಂಟ ಮೋಟಾರಗಳನ್ನು ಬಾವಿಯಲ್ಲಿ ಒಗೆದು ನಷ್ಟಗೊಳಿಸಿದ ಸ್ಥಳದಲ್ಲಿ ನಿಮ್ಮ ಸಮಕ್ಷಮ ನಿಪಿ-1 ರಂತೆ ಸ್ಥಳ ಪಂಚನಾಮ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಮಗೆ ನಿಪಿ-1 ಗೊತ್ತಿದ್ದರೂ, ಆರೋಪಿತರು ನಿಮಗೆ ಪರಿಚಯಸ್ಥರಾಗಿದ್ದರಿಂದ ಸಹಾಯ ಮಾಡಲು, ಈಗ ಸುಳ್ಳು ಸಾಕ್ಷ್ಯನುಡಿಯುತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ತಿಳಿಸುತ್ತಾರೆ . ಆ ಕಾರಣ ಪಾಟೀ ಸವಾಲು ಇಲ್ಲಾ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ